# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 639
ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 12-03-2025

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸಾರಿಗೆ ಸಂಸ್ಥೆಗಳ ಆರ್ಥಿಕ ಸ್ಥಿತಿ ಸಂಪೂರ್ಣವಾಗಿ ಶೋಚನೀಯವಾಗಿದ್ದು, ಸಂಸ್ಥೆಗಳ "ಬಾಕಿ ಹೊರೆ" ಸತತವಾಗಿ ಹೆಚ್ಚುತ್ತಲೇ ಇದ್ದು, ಲಾಭದ ಹಳಿಗೆ ಶಾಶ್ವತವಾಗಿ ಮರಳಿ ಬಾರದ ಪರಿಸ್ಥಿತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ದಿನಾಂಕ:31.03.2023ರವರೆಗೆ ಒಟ್ಟು ರೂ.4099.38 ಕೋಟಿಗಳ ಹೊಣೆಗಾರಿಕೆ ಬಾಕಿಯಿರುವುದರಿಂದ (ಸಾಲದ ಬಾಕಿ ಹೊಣೆಗಾರಿಕೆ ಒಳಗೊಂಡಂತೆ), ಸದರಿ ಬಾಕಿಯು ನಿಗಮಗಳ ತೀವ್ರ ಆರ್ಥಿಕ ಹಿನ್ನೆಡೆಗೆ ಕಾರಣವಾಗಿತ್ತು. ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ಮತ್ತು ಸರಬರಾಜುದಾರರ/ ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು.<br><br>ಅಲ್ಲದೇ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ಅಧಿಕಾರಿ/ನೌಕರರಿಗೆ ಕೈಗಾರಿಕಾ ಒಪ್ಪಂದದನ್ವಯ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಒಪ್ಪಂದವನ್ನು (ಅಗ್ರಿಮೆಂಟ್) ಪರಿಷ್ಕರಿಸಬೇಕಾಗಿದ್ದು, ಅದರಂತೆ ವೇತನವನ್ನು 2020ನೇ ವರ್ಷದಲ್ಲಿ ಪರಿಷ್ಕರಣೆ ಮಾಡಬೇಕಾಗಿತ್ತು, ಆದರೆ ಮೂಲವೇತನವನ್ನು ಶೇ.15ರಷ್ಟು ಹೆಚ್ಚಿಸಿ ಅದರಂತೆ ವೇತನ ಶ್ರೇಣಿಗಳನ್ನು ಪರಿಷ್ಕರಿಸಿ ದಿನಾಂಕ:01.03.2023ರಿಂದ ಜಾರಿಗೊಳಿಸಲಾಗಿದೆ. **ಸದರಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಅಧಿಕಾರಿ/ನೌಕರರಿಗೆ ವೇತನವನ್ನು ಪಾವತಿಸಲು ಆಯವ್ಯಯದಲ್ಲಿ ಯಾವುದೇ ಅನುದಾನವನ್ನು ಮೀಸಲಿರಿಸಿರಲಿಲ್ಲ ಹಾಗೂ ನಿಗಮಗಳಿಗೆ ಅನುದಾನ ಬಿಡುಗಡೆ ಮಾಡಿರಲಿಲ್ಲ.**<br><br>ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act,1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಿದೆ.<br><br>ಡೀಸೆಲ್ ತೈಲ ಬೆಲೆ ಹೆಚ್ಚಳದೊಂದಿಗೆ ಸಿಬ್ಬಂದಿ ವೆಚ್ಚ, ವಾಹನ ಬಿಡಿ ಭಾಗಗಳ ವೆಚ್ಚ ಒಳಗೊಂಡಂತೆ ಒಟ್ಟು ಕಾರ್ಯಾಚರಣೆ ವೆಚ್ಚ ಹೆಚ್ಚಾಗಿ ನಿಗಮಕ್ಕೆ ಹೆಚ್ಚಿನ ಆರ್ಥಿಕ ಹೊರೆಯುಂಟಾಗಿದ್ದ ಕಾರಣ ಅನಿವಾರ್ಯವಾಗಿ ದಿನಾಂಕ:04.01.2025ರಂತೆ ಶೇಕಡ 15ರಷ್ಟು ಪ್ರಯಾಣಿಕ ಬಸ್ ಪ್ರಯಾಣದರಗಳನ್ನು ಪರಿಷ್ಕರಣೆ ಮಾಡಲಾಗಿದೆ. |
| ಆ. | ಪ್ರಸ್ತುತ, ಸಾರಿಗೆ ಸಂಸ್ಥೆಗಳು ಪಾವತಿಸಲು ಉಳಿಸಿಕೊಂಡಿರುವ ವಿವಿಧ ರೀತಿಯ ಬಾಕಿಗಳ ವಿವರಗಳೇನು; ಒಟ್ಟು ಮೊತ್ತವೆಷ್ಟು; | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳು ಪಾವತಿಸಲು ಉಳಿಸಿಕೊಂಡಿರುವ ಬಾಕಿಗಳ ವಿವರ ಮತ್ತು ಮೊತ್ತದ ವಿವರ ಕೆಳಕಂಡಂತಿದೆ:- |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

**ಕ.ರಾ.ರ.ಸಾ.ನಿಗಮ**

ನಿಗಮದಲ್ಲಿ ದಿನಾಂಕ:05.03.2025ರಲ್ಲಿದಂತೆ ಒಟ್ಟು ರೂ.1554.30 ಕೋಟಿಗಳ ಹೊಣೆಗಾರಿಕೆ ಕ್ರೋಢೀಕೃತವಾಗಿದ್ದು, ವಿವರಗಳು ಕೆಳಕಂಡಂತಿದೆ:

| ವಿವರ | ಬಾಕಿ ಮೊಬಲಗು (ರೂ. ಕೋಟಿಗಳಲ್ಲಿ) |
|---|---|
| ಭವಿಷ್ಯ ನಿಧಿ | 834.83 |
| ನಿವೃತ್ತ ನೌಕರರ ಉಪಧನ / ರಜೆ ನಗಧೀಕರಣ | 40.93 |
| ಸಿಬ್ಬಂದಿಗಳ ಬಾಕಿ | 50.85 |
| ಇಂಧನ ಸರಬರಾಜುದಾರರಿಗೆ ಬಾಕಿ | 248.14 |
| ಸರಬರಾಜುದಾರರ ಬಾಕಿ | 27.00 |
| ಅಪಘಾತ ಪರಿಹಾರ ಪ್ರಕರಣಗಳು | 48.56 |
| ಇತರೆ | 42.28 |
| **I ಒಟ್ಟು** | **1292.59** |
| II ಸಾಲದ ಹೊಣೆಗಾರಿಕೆ | 261.71 |
| **I+II ಒಟ್ಟು** | **1554.30** |

**ಬೆಂ.ಮ.ಸಾ.ಸಂಸ್ಥೆ**

ಸಂಸ್ಥೆಯಲ್ಲಿ ಫೆಬ್ರುವರಿ-2025ರ ಅಂತ್ಯಕ್ಕೆ ಒಟ್ಟು ರೂ.2696.75 ಕೋಟಿಗಳ ಹೊಣೆಗಾರಿಕೆ ಕ್ರೋಢೀಕೃತವಾಗಿದ್ದು, ವಿವರಗಳು ಕೆಳಕಂಡಂತಿದೆ:

| ವಿವರ | ಮೊತ್ತ (ರೂ.ಕೋಟಿಗಳಲ್ಲಿ) |
|---|---|
| ಭವಿಷ್ಯನಿಧಿ ನ್ಯಾಸ ಮಂಡಳಿ | 900.46 |
| ನಿವೃತ್ತಿ ನೌಕರರ ಉಪಧನ & ರಜೆ ನಗದೀಕರಣ ಬಾಕಿ | 159.12 |
| ಹಾಲಿ ಸಿಬ್ಬಂದಿಗಳ ಬಾಕಿ ಪಾವತಿ | 186.61 |
| ಸರಬರಾಜುದಾರರ ಬಿಲ್ ಪಾವತಿ | 157.87 |
| ಇಂಧನ ಬಾಕಿ ಪಾವತಿ | 451.76 |
| ಎಂ.ವಿ.ಸಿ | 16.33 |
| ಇತರೆ ಬಿಲ್ಲುಗಳು | 202.15 |
| ಒಟ್ಟು ಬಾಕಿ ಹೊಣೆಗಾರಿಕೆ-ಅ | 2074.30 |
| ಸಾಲದ ಬಾಕಿ ಹೊಣೆಗಾರಿಕೆ-ಆ | 622.45 |
| ಒಟ್ಟು (ಅ+ಆ) | 2696.75 |

(ವೇತನ ಪರಿಷ್ಕರಣೆ ಅಂದಾಜು ಹಿಂಬಾಕಿ ಮೊತ್ತ ರೂ.545.93 ಕೋಟಿಗಳನ್ನು ಹೊರತುಪಡಿಸಿ)

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
ವಾ.ಕ.ರ.ಸಾ.ನಿಗಮ<br>
ಸಂಸ್ಥೆಯಲ್ಲಿ ಫೆಬ್ರುವರಿ-2025ರ ಅಂತ್ಯಕ್ಕೆ ಒಟ್ಟು ರೂ.1533.33 ಕೋಟಿಗಳ ಹೊಣೆಗಾರಿಕೆ ಕ್ರೋಢೀಕೃತವಾಗಿದ್ದು, ವಿವರಗಳು ಕೆಳಕಂಡಂತಿದೆ<br>
(ರೂ.ಕೋಟಿಗಳಲ್ಲಿ)
<table>
<tr><th>ವಿವರ</th><th>ಮೊತ್ತ</th></tr>
<tr><td>ಭವಿಷ್ಯ ನಿಧಿ</td><td>1166.90</td></tr>
<tr><td>ನಿವೃತ್ತ ನೌಕರರ</td><td>74.54</td></tr>
<tr><td>ಸಿಬ್ಬಂದಿಗಳ ಬಾಕಿ ಪಾವತಿ</td><td>28.73</td></tr>
<tr><td>ಸರಬರಾಜುದಾರರ ಪಾವತಿ</td><td>16.45</td></tr>
<tr><td>ಇಂಧನ(ಮೇ:ಹೆಚ್.ಪಿ.ಸಿ.ಎಲ್)</td><td>106.18</td></tr>
<tr><td>ಎಮ್.ವಿ.ಸಿ.</td><td>58.05</td></tr>
<tr><td>ಇತರೆ ಬಿಲ್ಲುಗಳು</td><td>6.43</td></tr>
<tr><td>ಸಾಲದ ಹೊಣೆಗಾರಿಕೆ</td><td>76.25</td></tr>
<tr><td>ಒಟ್ಟು</td><td>1533.53</td></tr>
</table>
ಕ.ಕ.ರ.ಸಾ.ನಿಗಮ<br>
ನಿಗಮದಲ್ಲಿ ಫೆಬ್ರುವರಿ-2025ರ ಅಂತ್ಯಕ್ಕೆ ಒಟ್ಟು ರೂ.715.25 ಕೋಟಿಗಳ ಹೊಣೆಗಾರಿಕೆ ಕ್ರೋಢೀಕೃತವಾಗಿದ್ದು, ವಿವರಗಳು ಕೆಳಕಂಡಂತಿದೆ.
<table>
<tr><th>ಹೊಣೆಗಾರಿಕೆ ವಿವರ</th><th>ಮೊತ್ತ<br>(ಕೋಟಿಗಳಯಲ್ಲಿ)</th></tr>
<tr><td>ಭವಿಷ್ಯ ನಿಧಿ</td><td>172.04</td></tr>
<tr><td>ನಿವೃತ್ತ ನೌಕರರ ಬಾಕಿ</td><td>21.80</td></tr>
<tr><td>ಸಿಬ್ಬಂದಿಗಳ ಬಾಕಿ ಪಾವತಿ</td><td>48.08</td></tr>
<tr><td>ಸರಬರಾಜುದಾರರ ಬಾಕಿ</td><td>11.32</td></tr>
<tr><td>ಇಂಧನ</td><td>102.00</td></tr>
<tr><td>ಅಪಘಾತ ಪರಿಹಾರ ಪ್ರಕರಣ</td><td>21.28</td></tr>
<tr><td>ಮೋಟಾರು ವಾಹನ ತೆರಿಗೆ</td><td>170.49</td></tr>
<tr><td>ಇತರೆ ಬಿಲ್ಲುಗಳು</td><td>6.50</td></tr>
<tr><td>ಬ್ಯಾಂಕ ಸಾಲ</td><td>161.74</td></tr>
<tr><td>ಒಟ್ಟು</td><td>715.25</td></tr>
</table>
</td></tr>
<tr><td>ಇ.</td><td>ಪ್ರಸ್ತುತ ಸಂಸ್ಥೆಗಳ ಪಾವತಿಸಲು ಉಳಿಸಿಕೊಂಡಿರುವ ವಿವಿಧ ರೀತಿಯ ಬಾಕಿ ಮೊತ್ತವನ್ನು ಪಾವತಿಸಲು ಸರ್ಕಾರ ಇದುವರೆಗೆ ಏನು ಕ್ರಮ ಕೈಗೊಂಡಿದೆ:</td><td>
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:-<br><br>
ಸರ್ಕಾರವು ಪ್ರಯಾಣಿಕರಿಗೆ ಸಾರಿಗೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಲು ಕ.ರಾ.ರ.ಸಾ.ನಿಗಮಕ್ಕೆ 2023-24 ನೇ ಸಾಲಿನಲ್ಲಿ ರೂ.40.00 ಕೋಟಿಗಳ ಮತ್ತು 2024-25ನೇ ಸಾಲಿನಲ್ಲಿ ಫೆಬ್ರುವರಿ-25ರ ಅಂತ್ಯದವರೆಗೆ ರೂ.33.14 ಕೋಟಿಗಳ ಅನುದಾನ ಬಿಡುಗಡೆಗೊಳಿಸಿರುತ್ತದೆ.<br><br>
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:-<br><br>
ಸಂಸ್ಥೆಗೆ ಕಳೆದ ಮತ್ತು ಪ್ರಸಕ್ತ ವರ್ಷದಲ್ಲಿ ಧನ ಸಹಾಯ/ಪರಿಹಾರ ರೂಪದಲ್ಲಿ ಸಂಸ್ಥೆಯು ಆರ್ಥಿಕ ನಷ್ಟವನ್ನು
</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಪರಿಗಣಿಸಿ Opex difference in cost (Viability of Gap Funding –VGF)ರಡಿ 2023-24ನೇ ಸಾಲಿನಲ್ಲಿ ರೂ.253.29 ಕೋಟಿ ಮತ್ತು 124.89 ಕೋಟಿಗಳನ್ನು (ಹಂಚಿಕೆ ರೂ.150.00 ಕೋಟಿ) ಆರ್ಥಿಕ ನೆರವನ್ನು ಒದಗಿಸಿರುತ್ತದೆ.<br><br>ಸರ್ಕಾರವು ಪ್ರಯಾಣಿಕರಿಗೆ ಸಾರಿಗೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಲು ಸಂಸ್ಥೆಗೆ 2023-24ನೇ ಸಾಲಿನಲ್ಲಿ ರೂ.40.00 ಕೋಟಿಗಳ ಮತ್ತು 2024-25ನೇ ಸಾಲಿನಲ್ಲಿ ರೂ.40.00 ಕೋಟಿಗಳ ಅನುದಾನ ಬಿಡುಗಡೆಗೊಳಿಸಿರುತ್ತದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:-**<br><br>ಸರ್ಕಾರವು ಪ್ರಯಾಣಿಕರಿಗೆ ಸಾರಿಗೆ ಮೂಲಭೂತ ಸೌಲಭ್ಯವನ್ನು ಕಲ್ಪಿಸಲು ವಾ.ಕ.ರ.ಸಾ.ಸಂಸ್ಥೆಗೆ 2023-24 ನೇ ಸಾಲಿನಲ್ಲಿ ರೂ.30.36 ಕೋಟಿಗಳನ್ನು ಮತ್ತು ಫೆಬ್ರುವರಿ- 25 ರ ಅಂತ್ಯಕ್ಕೆ ರೂ.40.00 ಕೋಟಿಗಳ ಅನುದಾನ ಬಿಡುಗಡೆಗೊಳಿಸರುತ್ತದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ:-**<br><br>ಸರ್ಕಾರವು ಪ್ರಯಾಣಿಕರು ಸಾರಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ನಿಗಮಕ್ಕೆ 2023-24ನೇ ಸಾಲಿನಲ್ಲಿ ರೂ.15.00 ಕೋಟಿ 2024-25ನೇ ಸಾಲಿನಲ್ಲಿ ಫೆಬ್ರುವರಿ 2025ರ ಅಂತ್ಯದವರೆಗೆ ರೂ15.00 ಕೋಟಿ ಅನುದಾನ ಬಿಡುಗಡೆಗೊಳಿಸಿರುತ್ತದೆ.<br><br>ಅಲ್ಲದೇ, **ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ಈ ಕೆಳಕಂಡಂತೆ ಆರ್ಥಿಕ ನೆರವನ್ನು ನೀಡಲಾಗಿದೆ.**<br><br>• ನವೆಂಬರ್-2024ರ ಅಂತ್ಯಕ್ಕೆ ಬಾಕಿ ಉಳಿಸಿಕೊಂಡಿರುವ ಶಾಸನಬದ್ಧ ಪಾವತಿಯಾದ ಭವಿಷ್ಯ ನಿಧಿ ಹಾಗೂ ಇಂಧನದ ಬಾಕಿ ಮೊತ್ತ ಪಾವತಿಸಲು ಈ ಕೆಳಕಂಡಂತೆ ನಿಗಮವಾರು ಒಟ್ಟು ರೂ.2000.00 ಕೋಟಿ ಮೊತ್ತದ ಸಾಲವನ್ನು ಸರ್ಕಾರದ/ಗ್ಯಾರಂಟಿಯೊಂದಿಗೆ ಹಣಕಾಸು ಸಂಸ್ಥೆಗಳಿಂದ ಪಡೆಯಲು ಅನುಮೋದನೆ ನೀಡಲಾಗಿದೆ:-<br><br>**(ರೂ.ಕೋಟಿಗಳಲ್ಲಿ)**<br>**ಸಂಸ್ಥೆ** — **ಸಾಲದ ಮೊತ್ತ**<br>ಕ.ರಾ.ರ.ಸಾ.ನಿಗಮ — 623.80<br>ಬೆಂ.ಮ.ಸಾ.ಸಂಸ್ಥೆ — 589.20<br>ವಾ.ಕ.ರ.ಸಾ.ಸಂಸ್ಥೆ — 646.00<br>ಕ.ಕ.ರ.ಸಾ.ನಿಗಮ — 141.00<br>**ಒಟ್ಟು** — **2000.00** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | • 2024-25ನೇ ಸಾಲಿನ ಆಯವ್ಯಯದಲ್ಲಿ ನಾಲ್ಕು ಸಾರಿಗೆ ನಿಗಮಗಳಲ್ಲಿ ದಿನಾಂಕ:01.01.2020ರಿಂದ ದಿನಾಂಕ:28.02.2023ರವರೆಗಿನ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ ಮತ್ತು ನೌಕರರಿಗೆ ದಿನಾಂಕ:01.01.2020ರ ಪರಿಷ್ಕೃತ ವೇತನ ಶ್ರೇಣಿಯನ್ವಯ ಪಾವತಿಸಬೇಕಾದ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸ ಮೊತ್ತದ ಪಾವತಿಗಾಗಿ ಒಟ್ಟು ರೂ.224.05 ಕೋಟಿಗಳನ್ನು ಈ ಕೆಳಕಂಡಂತೆ ನಿಗಮವಾರು ಬಿಡುಗಡೆಗೊಳಿಸಲಾಗಿದೆ. |

**(ರೂ.ಕೋಟಿಗಳಲ್ಲಿ)**

| **ಸಾರಿಗೆ ಸಂಸ್ಥೆ** | **ಬಿಡುಗಡೆ ಮೊತ್ತ** |
|---|---|
| ಕ.ರಾ.ರ.ಸಾ.ನಿಗಮ | 86.55 |
| ಬೆಂ.ಮ.ಸಾ.ಸಂಸ್ಥೆ | 50.25 |
| ವಾ.ಕ.ರ.ಸಾ.ಸಂಸ್ಥೆ | 51.50 |
| ಕ.ಕ.ರ.ಸಾ.ನಿಗಮ | 35.75 |
| **ಒಟ್ಟು** | **224.05** |

• 2024-25ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿಸಬೇಕಾಗಿರುವ ಮೋಟಾರು ವಾಹನ ತೆರಿಗೆಯ ಅಂದಾಜು ಒಟ್ಟಾರೆ ಮೊತ್ತ ರೂ.63776.00 ಲಕ್ಷಗಳಲ್ಲಿ ಪ್ರಸ್ತುತ ರೂ.57690.90 ಲಕ್ಷಗಳನ್ನು ಪುಸ್ತಕ ಹೊಂದಾಣಿಕೆ ಮಾಡಿಕೊಳ್ಳಲು ಅನುಮೋದನೆ ನೀಡಿ ಆದೇಶಿಸಿದೆ.

**(ರೂ.ಲಕ್ಷಗಳಲ್ಲಿ)**

| **ಸಂಸ್ಥೆಗಳು** | **ಪುಸ್ತಕ ಹೊಂದಾಣಿಕೆ ಮೊತ್ತ** |
|---|---|
| ಕ.ರಾ.ರ.ಸಾ.ನಿಗಮ | 24811.22 |
| ಬೆಂ.ಮ.ಸಾ.ಸಂಸ್ಥೆ | 9445.00 |
| ವಾ.ಕ.ರ.ಸಾ.ಸಂಸ್ಥೆ | 12598.00 |
| ಕ.ಕ.ರ.ಸಾ.ನಿಗಮ | 10836.68 |
| **ಒಟ್ಟು** | **57690.90** |

• ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳು 2023-24ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿಸಬೇಕಾಗಿರುವ ರೂ.581.47 ಕೋಟಿಗಳ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ:

**(ರೂ.ಕೋಟಿಗಳಲ್ಲಿ)**

| **ಕ್ರ. ಸಂ.** | **ಸಾರಿಗೆ ಸಂಸ್ಥೆ** | **ಮೊತ್ತ** |
|---|---|---|
| 1 | ಕ.ರಾ.ರ.ಸಾ.ನಿಗಮ | 243.52 |
| 2 | ಬೆಂ.ಮ.ಸಾ.ಸಂಸ್ಥೆ | 119.88 |
| 3 | ವಾ.ಕ.ರ.ಸಾ.ಸಂಸ್ಥೆ | 103.91 |
| 4 | ಕ.ಕ.ರ.ಸಾ.ನಿಗಮ | 114.16 |
| **ಒಟ್ಟು** | | **581.47** |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>

<ul><li>2023-24ನೇ ಸಾಲಿನಲ್ಲಿ ವಿಶೇಷ ಬಂಡವಾಳ ನೆರವಿನಡಿ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಒದಗಿಸಿರುವ ಒಟ್ಟು ರೂ.50000.00 ಲಕ್ಷಗಳ ಅನುದಾನದಲ್ಲಿ ಈ ಕೆಳಕಂಡಂತೆ ನಿಗಮವಾರು ಹೊಸ ಬಸ್ಸುಗಳನ್ನು ಖರೀದಿಸಲು/ಜಿ.ಸಿ.ಸಿ ಮಾದರಿಯಲ್ಲಿ ಕಾರ್ಯಾಚರಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನವನ್ನೂ ಸಹ ಬಿಡುಗಡೆಗೊಳಿಸಲಾಗಿದೆ.</li></ul>

(ರೂ.ಲಕ್ಷಗಳಲ್ಲಿ)

<table>
<tr><th>ಸಾರಿಗೆ ಸಂಸ್ಥೆ</th><th>ಬಿಡುಗಡೆ ಮೊತ್ತ</th></tr>
<tr><td>ಕ.ರಾ.ರ.ಸಾ.ನಿಗಮ</td><td>10000.00</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>15000.00</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>15000.00</td></tr>
<tr><td>ಕ.ಕ.ರ.ಸಾ.ನಿಗಮ</td><td>10000.00</td></tr>
<tr><td>ಒಟ್ಟು</td><td>50000.00</td></tr>
</table>

</td></tr>
<tr><td>ಈ.</td><td>ನಿವೃತ್ತ ನೌಕರರು ಮತ್ತು ಹಾಲಿ ನೌಕರರಿಗೆ ಪಾವತಿಸಬೇಕಾಗಿರುವ ಬಾಕಿ ಮೊತ್ತವೆಷ್ಟು; ಮತ್ತು ಸದರಿ ಬಾಕಿ ಮೊತ್ತವನ್ನು ಯಾವ ಕಾಲಮಿತಿಯೊಳಗೆ ನೌಕರರಿಗೆ ಸಂಪೂರ್ಣವಾಗಿ ಪಾವತಿಸಲಾಗುವುದು:</td><td>

ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ನಿವೃತ್ತ ನೌಕರರು ಮತ್ತು ಹಾಲಿ ನೌಕರರಿಗೆ ಪಾವತಿಸಬೇಕಾಗಿರುವ ಬಾಕಿ ಮೊತ್ತದ ವಿವರ ಕೆಳಕಂಡಂತಿದೆ:-<br>
(ರೂ.ಕೋಟಿಗಳಲ್ಲಿ)

<table>
<tr><th>ನಿಗಮ</th><th>ನಿವೃತ ನೌಕರರು</th><th>ಹಾಲಿ ನೌಕರರು</th><th>ಒಟ್ಟು</th></tr>
<tr><td>ಕ.ರಾ.ರ.ಸಾ.ನಿಗಮ</td><td>40.93</td><td>40.31</td><td>81.24</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>159.12</td><td>186.61</td><td>345.73</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>25.09</td><td>18.62</td><td>43.71</td></tr>
<tr><td>ಕ.ಕ.ರ.ಸಾ.ನಿಗಮ</td><td>21.80</td><td>48.08</td><td>69.88</td></tr>
<tr><td>ಒಟ್ಟು</td><td>246.94</td><td>293.62</td><td>540.56</td></tr>
</table>

ನಿವೃತ ನೌಕರರ ಬಾಕಿಯನ್ನು ಮಾರ್ಚ್-2025ರ ಮಾಹೆಯಲ್ಲಿ ಪಾವತಿಸಲು ಹಾಗೂ ಹಾಲಿ ನೌಕರರಿಗೆ ಹಿಂಬಾಕಿಯನ್ನು ನಿಗಮದ ಆರ್ಥಿಕ ಪರಿಸ್ಥಿತಿಯ ಅನುಗುಣವಾಗಿ ಪಾವತಿಸಲು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಲಾಗುವುದು.

ಬೆಂ.ಮ.ಸಾ.ಸಂಸ್ಥೆ<br>
ಸಂಸ್ಥೆಯ ನಗದು ಹರಿವಿನ ಆಧಾರದ ಮೇಲೆ ಮುಂಬರುವ ದಿನಗಳಲ್ಲಿ ಹಂತ ಹಂತವಾಗಿ ಬಾಕಿ ಮೊತ್ತವನ್ನು ಪಾವತಿಸಲು ಕ್ರಮ ವಹಿಸಲಾಗುವುದು.

ವಾ.ಕ.ರ.ಸಾ.ಸಂಸ್ಥೆ<br>
ನಿವೃತ ನೌಕರರ ಬಾಕಿ ಹಾಗೂ ಹಾಲಿ ನೌಕರರಿಗೆ ಹಿಂಬಾಕಿಯನ್ನು ಸಂಸ್ಥೆಯ ಆರ್ಥಿಕ ಪರಿಸ್ಥಿತಿಯ ಅನುಗುಣವಾಗಿ ಹಂತ ಹಂತವಾಗಿ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | **ಕ.ಕ.ರ.ಸಾ.ನಿಗಮ**<br>ನಿವೃತ ನೌಕರರ ಬಾಕಿ ಹಾಗೂ ಹಾಲಿ ನೌಕರರಿಗೆ ಹಿಂಬಾಕಿಯನ್ನು ನಿಗಮದ ಆರ್ಥಿಕ ಪರಿಸ್ಥಿತಿಯ ಅನುಗುಣವಾಗಿ ಹಂತ ಹಂತವಾಗಿ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು. |
| ಉ. | ಯಾವ ಕಾಲಮಿತಿಯೊಳಗೆ ಸಾರಿಗೆ ಸಂಸ್ಥೆಗಳ ಬಾಕಿಗಳ ಹೊರೆಯನ್ನು ಸಂಪೂರ್ಣವಾಗಿ ನಿವಾರಿಸಿ ಅವುಗಳನ್ನು ಲಾಭದಾಯಕವಾಗಿ ಹಳಿಗೆ ತರಲಾಗುವುದು? | ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳು ಸಾರ್ವಜನಿಕ ಪ್ರಯಾಣಿಕರಿಗೆ ಕೈಗೆಟಕುವ ದರದಲ್ಲಿ ಉತ್ತಮ ಸಾರಿಗೆ ಸೌಲಭ್ಯವನ್ನು ಕಲ್ಪಿಸುವ ಮೂಲ ಧ್ಯೇಯೋದ್ದೇಶವನ್ನು ಹೊಂದಿದ್ದು, ಮುಂಬರುವ ದಿನಗಳಲ್ಲಿ ನಿಗಮಗಳ ನಗದು ಹರಿವಿನ ಅನುಸಾರ ಹಂತ ಹಂತವಾಗಿ ಬಾಕಿ ಮೊತ್ತವನ್ನು ಪಾವತಿಸಲು ಆದ್ಯತೆಯ ಮೇರೆಗೆ ಕ್ರಮ ವಹಿಸಲಾಗುವುದು. |

ಸಂಖ್ಯೆ: ಟಿಡಿ 46 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು